**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ::ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ::ಬೆಂಗಳೂರು-09**

**KARNATAKA STATE ROAD TRANSPORT CORPORATION**

**Kempegowda Bus Station Division-Bangaluru-09**

ಸಂ/ಕರಾಸಾ/ವಿನಿ/ಕೆಂಬನಿ/ವಾ/ 840 /2024-25 ದಿನಾಂಕ:02/12/2024

**ಇ-ಟೆಂಡರ್/ ಸಂಧಾನ ಪ್ರಕಟಣೆ ಸಂಖ್ಯೆ: 05/2024-25**

**********

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೆಂಪೇಗೌಡ ಬಸ್ ನಿಲ್ದಾಣ ವಿಭಾಗದ ವ್ಯಾಪ್ತಿಯ ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಬಸ್ ನಿಲ್ದಾಣ ಮತ್ತು ಪೀಣ್ಯದಲ್ಲಿನ ಶ್ರೀ ಬಸವೇಶ್ವರ ಬಸ್ ನಿಲ್ದಾಣದಲ್ಲಿ ಖಾಲಿಯಾಗಿರುವ ಮತ್ತು ಖಾಲಿಯಾಗಲಿರುವ ಕಟ್ಟಿದ/ ತೆರೆದ ಸ್ಥಳದ ವಾಣಿಜ್ಯ ಮಳಿಗೆಗಳಿಗೆ 03/05/10 ವರ್ಷದ ಅವಧಿಗೆ "ಮಳಿಗೆ ಹೇಗಿದೆಯೋ ಹಾಗೆಯೇ" ಎಂಬ ಷರತ್ತು ಹಾಗೂ ಪರವಾನಗಿಯ ಆಧಾರದ ಮೇಲೆ (ಪ್ರತಿ ವರ್ಷ 10% ರಷ್ಟು ಪರವಾನಗಿ ಶುಲ್ಕದ ಹೆಚ್ಚಳದೊಂದಿಗೆ) ಪರವಾನಗಿದಾರರನ್ನು ಆಯ್ಕೆ ಮಾಡಲು **ದಿನಾಂಕ: 04.12.2024** ರಿಂದ **24.12.2024** ರವರೆಗೆ **"ಇ-ಟೆಂಡರ್ ಮತ್ತು ಸಂಧಾನ ಕರೆಯಲಾಗಿದೆ."** ಇ-ಟೆಂಡರ್‌ನ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಕ.ರಾ.ರ.ಸಾ.ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿರುತ್ತದೆ. ಈ ಕೆಳಕಂಡ ದಿನಾಂಕಗಳಂದು ಇ-ಟೆಂಡರ್ ತೆರೆಯಲಾಗುವುದು / ಸಂಧಾನ ಸಭೆ ನಡೆಸಲಾಗುವುದು. ಸದರಿ ಪರವಾನಗಿಗಳ ಅವಧಿ ಪೂರ್ಣಗೊಳ್ಳುವ 6 ತಿಂಗಳ ಮೊದಲು ಪುನಃ ಇ-ಟೆಂಡರ್/ಸಂಧಾನ ಪ್ರಕಟಣೆ ಹೊರಡಿಸಲಾಗುವುದು.

**ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ 787/2017, 794/2018 ಮತ್ತು 809/2021 ಹಾಗೂ ಅದರ ತಿದ್ದುಪಡಿ ಆದೇಶದಂತೆ ಇ-ಟೆಂಡರ್‌ಗೆ ಒಳಪಡುವ ಮಳಿಗೆಯ ವಿವರ.**

| ಕ್ರ ಸ | ಬಸ್ ನಿಲ್ದಾಣದ ಹೆಸರು | ಮಳಿಗೆಯ ಹೆಸರು & ಸಂಖ್ಯೆ | ವಿಸ್ತೀರ್ಣ (ಚ.ಅ) | ಮಾದರಿ & ಅವಧಿ | ಕನಿಷ್ಠ ಮಾಸಿಕ ಪರವಾನಗಿ ಶುಲ್ಕ (ರೂ.ಗಳಲ್ಲಿ) | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) | ಕೆಪಿಪಿ ಪೋರ್ಟಲ್ ಮೂಲಕ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ ರೂ.ಗಳಲ್ಲಿ | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ+ ಜಿ.ಎಸ್.ಟಿ (ರೂ.ಗಳಲ್ಲಿ) | ಮಳಿಗೆ ಖಾಲಿ ಇರುವ / ಖಾಲಿಯಾಗಲಿರುವ ದಿನಾಂಕ |
|---|---|---|---|---|---|---|---|---|---|
| 1. | ಕೆಂಬನಿ ಟರ್ಮಿನಲ್-1 | ಮಳಿಗೆ ಸಂಖ್ಯೆ-59 ಸಾಮಾನ್ಯ ಮಳಿಗೆ (ಸಾಮಾನ್ಯ ವರ್ಗಕ್ಕೆ ಮೀಸಲು) | 107 | ಕಟ್ಟಿದ ಮಳಿಗೆ 5 ವರ್ಷ | 4538/- | 13,114/- | 500/- | 118/- | ಖಾಲಿ ಇದೆ |
| 2. | ಕೆಂಬನಿ ಟರ್ಮಿನಲ್-2 | ಮಳಿಗೆ ಸಂಖ್ಯೆ-116 ಸಾಮಾನ್ಯ ಮಳಿಗೆ | 100 | ತೆರೆದ ಸ್ಥಳ 3 ವರ್ಷ | 3,00,000/- | 8,99,500/- | 500/- | 3,540/- | ದಿ:12.02.2025 ರಿಂದ ಅಥವಾ ಅವಧಿಗೆ ಮುನ್ನವೇ ಖಾಲಿಯಾಗಲಿದೆ |
| 3. | ಕೆಂಬನಿ ಟರ್ಮಿನಲ್-3 | ಮಳಿಗೆ ಸಂಖ್ಯೆ-04 ಸಸ್ಯಹಾರಿ ಉಪಹಾರ ಗೃಹ | 876.06 | ತೆರೆದ ಸ್ಥಳ 3 ವರ್ಷ | 3,60,580/- | 10,81,240/- | 500/- | 3,540/- | ದಿ:15.05.2025 ರಿಂದ ಅಥವಾ ಅವಧಿಗೆ ಮುನ್ನವೇ ಖಾಲಿಯಾಗಲಿದೆ |
| 4. | ಮೈರಬನಿ | ಮಳಿಗೆ ಸಂಖ್ಯೆ-30 (ಸಾಮಾನ್ಯ ಮಳಿಗೆ) (ಸಾಮಾನ್ಯ ವರ್ಗಕ್ಕೆ ಮೀಸಲು) | 82.50 | ಕಟ್ಟಿದ ಮಳಿಗೆ 5 ವರ್ಷ | 17,700/- | 52,600/- | 500/- | 209/- | ಖಾಲಿ ಇದೆ |

**ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ 787/2017 ಮತ್ತು 794/2018 ಹಾಗೂ 809/2021 ರಂತೆ ಇ.ಎಲ್.ಎಫ್ ನಿಗಧಿಪಡಿಸಿ "ಸಂಧಾನಕ್ಕೆ" ಒಳಪಡುವ ಮಳಿಗೆಯ ವಿವರ.**

| ಕ್ರಸಂ | ಬಸ್ ನಿಲ್ದಾಣದ ಹೆಸರು | ಮಳಿಗೆಯ ಹೆಸರು ಮತ್ತು ಸಂಖ್ಯೆ | ವಿಸ್ತೀರ್ಣ (ಚ.ಅ) | ಮಾದರಿ & ಅವಧಿ | ಕನಿಷ್ಠ ಮಾಸಿಕ ಪರವಾನಗಿ ಶುಲ್ಕ(ರೂ ಗಳಲ್ಲಿ) | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ.ಮೊತ್ತ (ರೂ.ಗಳಲ್ಲಿ) | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸ ಬೇಕಾದ ಅರ್ಜಿ ಶುಲ್ಕ+ಜಿ.ಎಸ್.ಟಿ (ರೂ.ಗಳಲ್ಲಿ) | ಖಾಲಿಯಾಗುವ ದಿನಾಂಕ |
|---|---|---|---|---|---|---|---|---|
| 1. | ಕೆಂಬನಿ ಟರ್ಮಿನಲ್-1 | ಮಳಿಗೆ ಸಂಖ್ಯೆ-46 (ಹೂವಿನ/ಮುಪ್ಪುಗುಚ್ಛ ಮಳಿಗೆ) | 103.82 | ಕಟ್ಟಿದ ಮಳಿಗೆ 5 ವರ್ಷ | 16,940/- | 50,820/- | 200/- | ಖಾಲಿ ಇದೆ |
| 2. | ಕೆಂಬನಿ ಟರ್ಮಿನಲ್-2 | ದ್ವಿಚಕ್ರ ವಾಹನ ನಿಲುಗಡೆ | 2909 | ತೆರೆದ ಸ್ಥಳ 3 ವರ್ಷ | 3,02,500/- | 9,07,500/- | 3,540/- | ಖಾಲಿ ಇದೆ |
| 3. | ಕೆಂಬನಿ ಟರ್ಮಿನಲ್-2ಎ | ಮಳಿಗೆ ಸಂಖ್ಯೆ-01 ಸಾಮಾನ್ಯ ಮಳಿಗೆ | 110.01 | ಕಟ್ಟಿದ ಮಳಿಗೆ 5 ವರ್ಷ | 71,390/- | 2,14,170/- | 843/- | ಖಾಲಿ ಇದೆ |
| 4. | ಕೆಂಬನಿ ಟರ್ಮಿನಲ್-3 | ದ್ವಿಚಕ್ರ /ಕಾರು ನಿಲುಗಡೆ. ಟರ್ಮಿನಲ್-3 ರ ಮುಖ್ಯದ್ವಾರದ ಎಡಭಾಗ & ಬಲಭಾಗದಲ್ಲಿರುವ ಖಾಲಿ ಜಾಗ | 5997.58 | ತೆರೆದ ಸ್ಥಳ 3 ವರ್ಷ | 6,59,734/- | 19,79,202/- | 3,540/- | ಖಾಲಿ ಇದೆ |
| 5. | ಕೆಂಬನಿ ಟರ್ಮಿನಲ್-3 | ದ್ವಿಚಕ್ರ /ಕಾರು ನಿಲುಗಡೆ ಇಂದಿರಾ ಕ್ಯಾಂಟಿನ್‌ನ ಹಿಂಭಾಗ & ಪಕ್ಕದಲ್ಲಿರುವ ಖಾಲಿ ಜಾಗ | 8218.27 | ತೆರೆದ ಸ್ಥಳ 3 ವರ್ಷ | 9,04,010/- | 27,12,030/- | 3,540/- | ಖಾಲಿ ಇದೆ |
| 6. | ಪೀಣ್ಯ ಶ್ರೀ ಬಸವೇಶ್ವರ ಬಸ್ ನಿಲ್ದಾಣ | **ಕೆಳ ಮಹಡಿ** ಕಲ್ಯಾಣ ಮಂಟಪ, ಮಾಲ್, ಆಸ್ಪತ್ರೆ, ಶೈಕ್ಷಣಿಕ ಸಂಸ್ಥೆ, ಇತರೆ ಯಾವುದಾದರೂ ದೊಡ್ಡ ಪ್ರಮಾಣದ ಕಾನೂನುಬದ್ಧ ವ್ಯವಹಾರ ಕೇಂದ್ರ / ಕಛೇರಿ ಉದ್ದೇಶಕ್ಕಾಗಿ | 7307.12 | ಕಟ್ಟಿದ ಮಳಿಗೆ 5+5 ವರ್ಷ | 3,82,674/- | 11,48,022/- | 3,540/- | ಖಾಲಿ ಇದೆ |
| 7. | ಪೀಣ್ಯ ಶ್ರೀ ಬಸವೇಶ್ವರ ಬಸ್ ನಿಲ್ದಾಣ | **ನೆಲ ಮಹಡಿ** ಕಲ್ಯಾಣ ಮಂಟಪ, ಮಾಲ್, ಆಸ್ಪತ್ರೆ, ಶೈಕ್ಷಣಿಕ ಸಂಸ್ಥೆ, ಇತರೆ ಯಾವುದಾದರೂ ದೊಡ್ಡ ಪ್ರಮಾಣದ ಕಾನೂನುಬದ್ಧ ವ್ಯವಹಾರ ಕೇಂದ್ರ / ಕಛೇರಿ ಉದ್ದೇಶಕ್ಕಾಗಿ | 4560.56 | ಕಟ್ಟಿದ ಮಳಿಗೆ 5+5 ವರ್ಷ | 2,38,837/- | 7,16,511/- | 2,818/- | ಖಾಲಿ ಇದೆ |
| 8. | ಪೀಣ್ಯ ಶ್ರೀ ಬಸವೇಶ್ವರ ಬಸ್ ನಿಲ್ದಾಣ | **ಮೊದಲನೇ ಮಹಡಿ** ಕಲ್ಯಾಣ ಮಂಟಪ, ಮಾಲ್, ಆಸ್ಪತ್ರೆ, ಶೈಕ್ಷಣಿಕ ಸಂಸ್ಥೆ, ಇತರೆ ಯಾವುದಾದರೂ ದೊಡ್ಡ ಪ್ರಮಾಣದ ಕಾನೂನುಬದ್ಧ ವ್ಯವಹಾರ ಕೇಂದ್ರ / ಕಛೇರಿ ಉದ್ದೇಶಕ್ಕಾಗಿ | 24173.59 | ಕಟ್ಟಿದ ಮಳಿಗೆ 5+5 ವರ್ಷ | 12,65,971/- | 37,97,913/- | 3,540/- | ಖಾಲಿ ಇದೆ |
| 9. | ಪೀಣ್ಯ ಶ್ರೀ ಬಸವೇಶ್ವರ ಬಸ್ ನಿಲ್ದಾಣ | **ಎರಡನೇ ಮಹಡಿ** ಕಲ್ಯಾಣ ಮಂಟಪ, ಮಾಲ್, ಆಸ್ಪತ್ರೆ, ಶೈಕ್ಷಣಿಕ ಸಂಸ್ಥೆ, ಇತರೆ ಯಾವುದಾದರೂ ದೊಡ್ಡ ಪ್ರಮಾಣದ ಕಾನೂನುಬದ್ಧ ವ್ಯವಹಾರ ಕೇಂದ್ರ | 50998.41 | ಕಟ್ಟಿದ ಮಳಿಗೆ 5+5 ವರ್ಷ | 9,02,747/- | 27,08,241/- | 3,540/- | ಖಾಲಿ ಇದೆ |

| | | | | | | | | |
|---|---|---|---|---|---|---|---|---|
| 10. | ಪೀಣ್ಯ ಶ್ರೀ ಬಸವೇಶ್ವರ ಬಸ್ ನಿಲ್ದಾಣ | ಒಟ್ಟಾರೆ ಬಸ್ ನಿಲ್ದಾಣ ಕಲ್ಯಾಣ ಮಂಟಪ, ಮಾಲ್, ಆಸ್ಪತ್ರೆ, ಶೈಕ್ಷಣಿಕ ಸಂಸ್ಥೆ, ಇತರೆ ಯಾವುದಾದರೂ ದೊಡ್ಡ ಪ್ರಮಾಣದ ಕಾನೂನುಬದ್ಧ ವ್ಯವಹಾರ ಕೇಂದ್ರ / ಕಛೇರಿ ಉದ್ದೇಶಕ್ಕಾಗಿ (ಏಕೈಕ ಅಭಿವೃದ್ಧಿದಾರರು) | 87039.68 | ಕಟ್ಟಿದ ಮಳಿಗೆ 5+5 ವರ್ಷ | 27,90,229/- | 83,70,687/- | 3,540/- | ಖಾಲಿ ಇದೆ |

**ವಿಶೇಷ ಸೂಚನೆ:-**

"ಸಂಧಾನಕ್ಕೆ" ಒಳಪಡುವ ಮಳಿಗೆಗಳ ಕ್ರಮ ಸಂಖ್ಯೆ 06 ರಿಂದ 10 ರವರೆಗಿನ ಮಳಿಗೆಗಳಿಗೆ 5 years + Another 5 years extendable subject to satisfactory payment of license fee ವರ್ಷಗಳ ಅವಧಿಗೆ ನಿಗದಿಪಡಿಸಿ, ಪ್ರತಿ ವರ್ಷ ಶೇ.10 ರಷ್ಟು ಮಾಸಿಕ ಪರವಾನಗಿ ಶುಲ್ಕ ಹೆಚ್ಚಳದ ಷರತ್ತಿನೊಂದಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಕ್ರಮ ಸಂಖ್ಯೆ 06 ರಿಂದ 10 ರವರೆಗಿನ ಮಳಿಗೆಗಳಿಗೆ ಭಾಗವಹಿಸುವ ಬಿಡ್ಡುದಾರರು ಈ ಕೆಳಕಂಡ ವಿಶೇಷ ಸೂಚನೆಗಳನ್ನು ಒದುವುದು.

1. ಪೀಣ್ಯ ಶ್ರೀ ಬಸವೇಶ್ವರ ಬಸ್ ನಿಲ್ದಾಣದಲ್ಲಿನ ಕೆಳಮಹಡಿ, ನೆಲಮಹಡಿ, ಮೊದಲನೇ ಮಹಡಿ, ಎರಡನೇ ಮಹಡಿ ಹಾಗೂ ಒಟ್ಟಾರೆ ಬಸ್ ನಿಲ್ದಾಣದ ಸ್ಥಳಾವಕಾಶಗಳಿಗೆ 10 (5 years + Another 5 years extendable subject to satisfactory payment of license fee) ವರ್ಷಗಳ ಅವಧಿಗೆ ನಿಗದಿಪಡಿಸಿ ಸಂಧಾನ ಆಹ್ವಾನಿಸಲಾಗಿರುತ್ತದೆ.
2. ಪೀಣ್ಯ ಬಸ್ ನಿಲ್ದಾಣದ ವಾಣಿಜ್ಯ ಸ್ಥಳಕ್ಕೆ ಆಯ್ಕೆಯಾದ ಪರವಾನಗಿದಾರರು ನಿಗಮದ ನಿಯಮಾವಳಿಗಳ ಷರತ್ತಿಗೊಳಪಟ್ಟು ಉಪ-ಪರವಾನಗಿ ನೀಡಬಹುದಾಗಿದೆ.
3. ಪೀಣ್ಯ ಬಸ್ ನಿಲ್ದಾಣದ ವಾಣಿಜ್ಯ ಸ್ಥಳಕ್ಕೆ ಮಹಡಿವಾರು ಪ್ರತ್ಯೇಕವಾಗಿ ಹಾಗೂ ಒಟ್ಟಾರೆ ಬಸ್ ನಿಲ್ದಾಣಕ್ಕೆ ಏಕೈಕ ಬಿಡ್ಡುದಾರರನ್ನು ಆಯ್ಕೆ ಮಾಡಲು ಟೆಂಡರ್ ಆಹ್ವಾನಿಸಲಾಗಿದ್ದು, ಒಂದು ವೇಳೆ ಎರಡು ರೀತಿಯಲ್ಲಿ ಬಿಡ್ಡುದಾರರು ಭಾಗವಹಿಸಿದಲ್ಲಿ, ಟೆಂಡರ್‌ನಲ್ಲಿ ಸ್ವೀಕರಿಸುವ ಬೇಡಿಕೆ ಹಾಗೂ ನಿಗಮದ ಹಿತದೃಷ್ಟಿಯನ್ನು ಆಧರಿಸಿ ಪರವಾನಗಿದಾರರನ್ನು ಆಯ್ಕೆ ಮಾಡುವ / ಬಿಡ್ಡನ್ನು ತಿರಸ್ಕರಿಸುವ ಅಂತಿಮ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿರುತ್ತದೆ.

**ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ 809/2021 ರನ್ವಯ ಕನಿಷ್ಠ ಮಾಸಿಕ ಪರವಾನಗಿ ಶುಲ್ಕ ನಿಗಧಿಪಡಿಸದೇ ಸಂಧಾನಕ್ಕೆ ಒಳಪಡುವ ಮಳಿಗೆಗಳ ವಿವರ.**

| ಕ್ರ.ಸಂ | ಬಸ್ ನಿಲ್ದಾಣದ ಹೆಸರು | ಮಳಿಗೆಯ ಹೆಸರು ಮತ್ತು ಸಂಖ್ಯೆ | ವಿಸ್ತೀರ್ಣ (ಚ.ಅ) | ಮಾದರಿ & ಅವಧಿ | ಕನಿಷ್ಠ ಮಾಸಿಕ ಪರವಾನಗಿ ಶುಲ್ಕ (ರೂ ಗಳಲ್ಲಿ) | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸ ಬೇಕಾದ ಇ.ಎಂ.ಡಿ. ಮೊತ್ತ(ರೂ.ಗಳಲ್ಲಿ | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ+ಜಿ.ಎಸ್.ಟಿ (ರೂ.ಗಳಲ್ಲಿ) | ಖಾಲಿಯಾಗುವ ದಿನಾಂಕ |
|---|---|---|---|---|---|---|---|---|
| 1. | ಕೆಂಬನಿ ಟರ್ಮಿನಲ್-1 | ಮಳಿಗೆ ಸಂಖ್ಯೆ-48 ಸಾಮಾನ್ಯ ಮಳಿಗೆ | 105.18 | ಕಟ್ಟಿದ ಮಳಿಗೆ 5 ವರ್ಷ | - | 72,273/- | 284/- | ಖಾಲಿ ಇದೆ |
| 2. | ಮೈರಬನಿ | ಮಳಿಗೆ ಸಂಖ್ಯೆ-6 ಸಾಮಾನ್ಯ ಮಳಿಗೆ | 134.43 | ಕಟ್ಟಿದ ಮಳಿಗೆ 5 ವರ್ಷ | - | 62,073/- | 244/- | ಖಾಲಿ ಇದೆ |

## ಸೂಚನೆ

1. ಇ-ಟೆಂಡರ್ ಪ್ರಕಟಣೆಯಲ್ಲಿ ಮಳಿಗೆಗಳಿಗೆ ನಿಗದಿಪಡಿಸಿದ ಇ.ಎಂ.ಡಿ. ಮೊತ್ತದಲ್ಲಿ ರೂ 500-00 ಗಳನ್ನು ಮಾತ್ರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಾವತಿಸುವುದು. ಉಳಿದ ಇ.ಎಂ.ಡಿ. ಮೊತ್ತವನ್ನು ಡಿ.ಡಿ.ಮೂಲಕ ಪಡೆದು ಸದರಿ ಡಿ.ಡಿ.ಯ ಹಿಂಭಾಗದಲ್ಲಿ ತಮ್ಮ ಹೆಸರು, ಬಿಡ್ ಮಾಡುವ ಮಳಿಗೆಯ ಹೆಸರು & ಮಳಿಗೆಯ ಸಂಖ್ಯೆಯನ್ನು ನಮೂದಿಸಿ, ಸದರಿ ಡಿ.ಡಿ.ಯ ಜೆರಾಕ್ಸ್ ಪ್ರತಿಯನ್ನು ಇತರೆ ದಾಖಲಾತಿಗಳೊಂದಿಗೆ ಅಪ್‌ಲೋಡ್ ಮಾಡುವುದು.
2. ಕೆಪಿಪಿ ಪೋರ್ಟಲ್‌ನಲ್ಲಿ ಭಾಗವಹಿಸುವ ಬಿಡ್‌ದಾರರು ಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿರುವ, ಅಪ್‌ಲೋಡ್ ಮಾಡಿರುವ ಎಲ್ಲಾ ದಾಖಲಾತಿಗಳ ಜೆರಾಕ್ಸ್ ಪ್ರತಿಗಳನ್ನು ಹಾಗೂ ಇ.ಎಂ.ಡಿ. ಮತ್ತು ಅರ್ಜಿ ಶುಲ್ಕದ ಮೂಲ ಡಿ.ಡಿ ಯೊಂದಿಗೆ ದಿನಾಂಕ: **04.12.2024** ರಿಂದ **24.12.2024** ವರೆಗೆ ಕಛೇರಿ ಅವಧಿ ಸಮಯ ಬೆಳಗ್ಗೆ 10:00 ರಿಂದ ಸಮಯ 17:00 ಗಂಟೆಯ ಒಳಗೆ ವಿಭಾಗೀಯ ಕಛೇರಿಯ ವಾಣಿಜ್ಯ ಶಾಖೆಯಲ್ಲಿರುವ ಬಾಕ್ಸ್‌ನಲ್ಲಿ ಹಾಕುವುದು.
3. ಕೆಪಿಪಿ ಪೋರ್ಟಲ್ ತಂತ್ರಾಂಶದಲ್ಲಿ ಅನ್ವಯವಾಗುವಂತಹ ಟೆಂಡರ್ ಪ್ರಕ್ರಿಯೆ ಶುಲ್ಕ (Tender Processing fee) ವನ್ನು ಇ-ಪೋರ್ಟಲ್‌ನಲ್ಲಿ ಪಾವತಿಸುವುದು.

4. ಇ-ಟೆಂಡರ್‌ನ ತಾಂತ್ರಿಕ ಬಿಡ್‌ನಲ್ಲಿ ಸೂಚಿಸಿರುವ ಸಮರ್ಪಕ ದಾಖಲಾತಿಗಳನ್ನು ಸಲ್ಲಿಸಿರುವ ಅರ್ಹ ಬಿಡ್ಡುದಾರರನ್ನು ಮಾತ್ರ ಆರ್ಥಿಕ ಟೆಂಡರ್‌ಗೆ ಪರಿಗಣಿಸುವುದು.
5. ಮೀಸಲಾತಿ ಅಡಿಯಲ್ಲಿ ನಿಗಧಿಪಡಿಸಿರುವ ಮಳಿಗೆಗೆ ಭಾಗವಹಿಸುವ ಬಿಡ್‌ದಾರರು / ಅರ್ಜಿದಾರರು ಮೀಸಲಾತಿಗೆ ಸಂಬಂಧಿಸಿದ ದೃಢೀಕೃತ ದಾಖಲೆಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಕಡ್ಡಾಯವಾಗಿ ಅಪ್‌ಲೋಡ್ ಮಾಡುವುದು.
6. ಮೀಸಲಾತಿ ಅಡಿಯಲ್ಲಿ ಬಿಡ್‌ದಾರರು/ಅರ್ಜಿದಾರರು ನಿಗಮದಲ್ಲಿ ಒಂದು ಮಳಿಗೆಯನ್ನು ಮಾತ್ರ ಪಡೆಯಲು ಅವಕಾಶವಿರುತ್ತದೆ.
7. **ಇ-ಟೆಂಡರ್ ಮೂಲಕ ಆಹ್ವಾನಿಸಿರುವ ಮಳಿಗೆಗಳಿಗೆ ನಿಗಧಿಪಡಿಸಿರುವ ಕನಿಷ್ಠ ಮಾಸಿಕ ಪರವಾನಗಿ ಶುಲ್ಕವು ಜಿಎಸ್‌ಟಿ ಹಾಗೂ ಅನ್ವಯಿಸುವ ಇತರೆ ಶುಲ್ಕಗಳನ್ನು ಒಳಗೊಂಡಿರುವುದಿಲ್ಲ.**
**"ಇ-ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್‌ದಾರರು ತೆರಿಗೆ ಹೊರತುಪಡಿಸಿ ಮಾಸಿಕ ಪರವಾನಗಿ ಶುಲ್ಕವನ್ನು (Exclusive of GST and other applicable taxes) ನಮೂದಿಸಬೇಕಿರುತ್ತದೆ. ಯಾವುದೇ ಸಂದರ್ಭದಲ್ಲಿಯೂ ಸಹ ಬಿಡ್‌ದಾರರು ಇ-ಟೆಂಡರ್‌ನಲ್ಲಿ ನಮೂದಿಸಿರುವ ಬಿಡ್ ಮೊತ್ತವನ್ನು ತೆರಿಗೆ ರಹಿತ (Exclusive of all applicable taxes) ಎಂದೇ ಪರಿಗಣಿಸಲಾಗುವುದು." ನಮೂದಿತ ಬಿಡ್ ಮೊತ್ತದ ಮೇಲೆ ಕಾಲಕಾಲಕ್ಕೆ ಅನ್ವಯಿಸುವ ಜಿಎಸ್‌ಟಿ ಮತ್ತು ಇತರೆ ತೆರಿಗೆಗಳನ್ನು ಪ್ರತ್ಯೇಕವಾಗಿ ಪಾವತಿಸಬೇಕಿರುತ್ತದೆ.**
8. ಸಂಧಾನದ ಮೂಲಕ ಆಹ್ವಾನಿಸಿರುವ ಮಳಿಗೆಗಳಿಗೆ ನಿಗಧಿಪಡಿಸಿರುವ ಕನಿಷ್ಠ ಮಾಸಿಕ ಪರವಾನಗಿ ಶುಲ್ಕವು ಜಿಎಸ್‌ಟಿ ಹಾಗೂ ಅನ್ವಯಿಸುವ ಇತರೆ ಶುಲ್ಕವನ್ನು ಒಳಗೊಂಡಿರುವುದಿಲ್ಲ. ಬಿಡ್ಡುದಾರರು ಸಂಧಾನದಲ್ಲಿ ನಮೂದಿಸುವ ಮೊತ್ತವನ್ನು ಕೇವಲ ಮಾಸಿಕ ಪರವಾನಿಗೆ ಶುಲ್ಕವೆಂದು ಮಾತ್ರ ಪರಿಗಣಿಸಲಾಗುವುದು. ಆಯ್ಕೆಗೊಂಡ ಹೆಚ್-1 ಬಿಡ್‌ದಾರರು ತಾವು ಸೂಚಿಸಿದ ಮಾಸಿಕ ಪರವಾನಿಗೆ ಶುಲ್ಕದ ಮೇಲೆ ಜಿಎಸ್‌ಟಿ ಹಾಗೂ ಅನ್ವಯಿಸುವ ಇತರೆ ಶುಲ್ಕಗಳನ್ನು ಪ್ರತಿ ಮಾಹೆ ಸಂದಾಯ ಮಾಡತಕ್ಕದ್ದು.
9. ಪ್ರಕಟಣೆಯಲ್ಲಿ ಕನಿಷ್ಠ ಮಾಸಿಕ ಪರವಾನಗಿ ಶುಲ್ಕ ನಮೂದಿಸಿ ಹಾಗೂ ನಮೂದಿಸದೇ ಸಂಧಾನಕ್ಕೆ ನಿಗಧಿಪಡಿಸಿರುವ ಮಳಿಗೆಗಳಿಗೆ ಸಂಧಾನದಲ್ಲಿ ಭಾಗವಹಿಸುವ ಬಿಡ್ಡುದಾರರು ಮಳಿಗೆಗೆ ಸೂಕ್ತ ಬಿಡ್ಡು ಮೊತ್ತವನ್ನು ಪಾವತಿಸಲು ಸಮ್ಮತಿಸಿದಲ್ಲಿ ಮಾತ್ರ ಪರಿಶೀಲಿಸಲಾಗುವುದು. ನಮೂದಿಸುವ ಮೊತ್ತವನ್ನು ಕೇವಲ ಮಾಸಿಕ ಪರವಾನಿಗೆ ಶುಲ್ಕವೆಂದು ಮಾತ್ರ ಪರಿಗಣಿಸಲಾಗುವುದು. ಆಯ್ಕೆಗೊಂಡ ಹೆಚ್-1 ಪರವಾನಿಗೆದಾರರು ತಾವು ಸೂಚಿಸಿದ ಮಾಸಿಕ ಪರವಾನಗಿ ಶುಲ್ಕದ ಮೇಲೆ ಜಿಎಸ್‌ಟಿ ಹಾಗೂ ಅನ್ವಯಿಸುವ ಇತರೆ ಶುಲ್ಕಗಳನ್ನು ಪ್ರತಿ ಮಾಹೆ ಸಂದಾಯ ಮಾಡತಕ್ಕದ್ದು.
10. ಸಂಧಾನಕ್ಕೆ ನಿಗಧಿಪಡಿಸಿರುವ ವಾಣಿಜ್ಯ ಮಳಿಗೆಗಳಿಗೆ ಭಾಗವಹಿಸುವ ಬಿಡ್ಡುದಾರರು ಅರ್ಜಿ ಫಾರಂ, ಷರತ್ತು ಹಾಗೂ ನಿಬಂಧನೆಗಳನ್ನು ಪಡೆಯಲು ಮಳಿಗೆಗೆ ನಿಗದಿಪಡಿಸಿದ ನಿಗದಿತ ಅರ್ಜಿ ಶುಲ್ಕದ ಮೊತ್ತಕ್ಕೆ ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗರವರ ಪದನಾಮಕ್ಕೆ ಡಿ.ಡಿ.ಯನ್ನು/ ನಗದನ್ನು ವಿಭಾಗೀಯ ಕಚೇರಿ ಅವಧಿಯಲ್ಲಿ ಪಾವತಿಸಿ **ದಿನಾಂಕ:27.12.2024** ರಂದು 17:00 ಗಂಟೆ ಒಳಗೆ ಸಲ್ಲಿಸಿ, ಅರ್ಜಿ ಮತ್ತು ಷರತ್ತು ನಿಬಂಧನೆಯ ಪ್ರತಿಗಳನ್ನು ಪಡೆಯಬಹುದಾಗಿದೆ.
11. ವೈಯಕ್ತಿಕ ಸಂಧಾನದಲ್ಲಿ ಭಾಗವಹಿಸುವ ಬಿಡ್‌ದಾರರು ಷರತ್ತು ನಿಬಂಧನೆಗಳನ್ನು ಒಪ್ಪಿಕೊಂಡು ಸಹಿ ಮಾಡಿ, ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ ಮೊತ್ತದ ಡಿ.ಡಿ.ಯನ್ನು ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಕೆಂಬನಿ ವಿಭಾಗ, ಬೆಂಗಳೂರು (Sr,Divisional controller, KSRTC, Kempegowda Bus station Division, Bengaluru) ರವರ ಪದನಾಮಕ್ಕೆ ಪಡೆದ ಡಿ.ಡಿ ಯ ಮೂಲ ಪ್ರತಿ ಹಾಗೂ ಷರತ್ತು ನಿಬಂಧನೆಗಳಲ್ಲಿ ಸೂಚಿಸಿರುವ ಅಗತ್ಯ ದಾಖಲಾತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಿ, ಭರ್ತಿ ಮಾಡಿದ ಅರ್ಜಿ ಫಾರಂ ಹಾಗೂ ದಾಖಲಾತಿಗಳ ಅಡಕದೊಂದಿಗೆ **ದಿನಾಂಕ:27.12.2024** ರಂದು ಸಮಯ 17:00 ಗಂಟೆ ಒಳಗೆ ವಿಭಾಗೀಯ ಕಛೇರಿಯಲ್ಲಿ ಸಲ್ಲಿಸುವುದು.
12. **ಟೆಂಡರ್ / ಸಂಧಾನ ಪ್ರಕಟಣೆಗೆ** ಸಂಬಂಧಿಸಿದಂತೆ ಷರತ್ತು/ನಿಯಮಗಳನ್ನು ಸದರಿ ಅವಧಿಯಲ್ಲಿ ಸಂದರ್ಭಾನುಸಾರವಾಗಿ ಹೆಚ್ಚುವರಿ ನಿಯಮಗಳನ್ನು ವಿಧಿಸಲು, ನಿಬಂಧನೆಗಳನ್ನು ಮಾರ್ಪಡಿಸಲು, ತಿದ್ದುಪಡಿಗೊಳಿಸಲು ಅಧಿಕಾರವನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

13. ಇ-ಟೆಂಡರ್/ಸಂಧಾನ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೇ ಮುಂದೂಡುವ & ತಿರಸ್ಕರಿಸುವ ಮಾರ್ಪಾಡು /ತಿದ್ದುಪಡಿಗೊಳಿಸುವ ಹಾಗೂ ರದ್ದು ಮಾಡುವ ಅಧಿಕಾರವನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

14. ದ್ವಿಚಕ್ರ ವಾಹನಗಳಿಗೆ ಪರವಾನಗಿದಾರರು ಗ್ರಾಹಕರಿಂದ ಪಡೆಯಬೇಕಾಗಿರುವ ದರಗಳ ಪಟ್ಟಿ ಈ ಕೆಳಕಂಡಂತಿರುತ್ತದೆ.

| ವಾಹನದ ವಿಧ | ದರ(₹ ಗಳಲ್ಲಿ) | | | | | |
|---|---|---|---|---|---|---|
| ಸಮಯ(ಗಂಟೆಗಳಲ್ಲಿ) | 0–2 | 2–4 | 4–8 | 8–12 | 12–24 | 24 ಗಂಟೆ ಮೇಲ್ಪಟ್ಟು |
| ಸೈಕಲ್ / ಸ್ಕೂಟರ್ ದ್ವಿಚಕ್ರ ವಾಹನ | 10/– | 20/– | 30/– | 40/– | 50/– | ಪ್ರತಿ ದಿನಕ್ಕೆ ರೂ.100/– |
| ಕಾರು | 20/– | 40/– | 60/– | 80/– | 100/– | ಪ್ರತಿದಿನಕ್ಕೆ ರೂ 200/– |

| ಕ್ರ ಸಂ | ವಿವರ | ದಿನಾಂಕ | ಸಮಯ |
|---|---|---|---|
| 1. | ಪೂರ್ವಭಾವಿ ಸಭೆ (Pre Bid Meeting Date and Time) | 12.12.2024 | 11:00 |
| 2. | ಟೆಂಡರ್‌ಗೆ ಸಂಬಂಧಿಸಿದಂತೆ ವಿವರಣೆ ಹಾಗೂ ಸ್ಪಷ್ಟೀಕರಣ ಸಂಬಂಧ ಕೊನೆಯ ದಿನಾಂಕ ಮತ್ತು ಸಮಯ | 17.12.2024 | 11:00 |
| 3. | ಇ-ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ (ಕೆಪಿಪಿ ಪೋರ್ಟಲ್ ಮೂಲಕ) | 24.12.2024 | 17:00 |
| 4. | ಅರ್ಜಿದಾರರು ಅರ್ಜಿ ಶುಲ್ಕ, (ಇ-ಟೆಂಡರ್) ಮತ್ತು ಇ.ಎಂ.ಡಿ (EMD) ಶುಲ್ಕದ ಮೂಲ ಡಿಡಿಯನ್ನು ಹಾಗೂ ಕೆಪಿಪಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿರುವ ಇತರೆ ಅಗತ್ಯ ದಾಖಲಾತಿಗಳನ್ನು ವಿಭಾಗೀಯ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ. | 26.12.2024 | 17:00 |
| 5. | ಇ-ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ (ಯಾವುದೇ ತಾಂತ್ರಿಕ ದೋಷ ಇಲ್ಲದಿದ್ದಲ್ಲಿ) | 27.12.2024 | 11:00 |
| 6. | ವೈಯಕ್ತಿಕ ಸಂಧಾನಕ್ಕೆ ನಿಗಧಪಡಿಸಿರುವ ಮಳಿಗೆಗೆ ಸಂಧಾನದಲ್ಲಿ ಭಾಗವಹಿಸುವವರು ಸಂಧಾನ ಅರ್ಜಿ ಪಡೆಯಲು ನಿಗಧಿಪಡಿಸಿರುವ ಕೊನೆಯ ದಿನಾಂಕ ಮತ್ತು ಸಮಯ (ಕಛೇರಿ ಸಮಯ ಬೆಳಿಗ್ಗೆ 10:00 ರಿಂದ ಸಂಜೆ 17:00 ವರೆಗೆ) | 27.12.2024 | 17:00 |
| 7. | ಇ-ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ (ಯಾವುದೇ ತಾಂತ್ರಿಕ ದೋಷ ಇಲ್ಲದಿದ್ದಲ್ಲಿ) | 30.12.2024 | 11:00 |
| 8. | ಸಂಧಾನ ಸಭೆ ನಡೆಯುವ ದಿನಾಂಕ ಮತ್ತು ಸಮಯ (ವೈಯಕ್ತಿಕ ಸಂಧಾನದ ಅರ್ಜಿಗಳನ್ನು ವಿಭಾಗೀಯ ಕಛೇರಿಯ ವಾಣಿಜ್ಯ ಶಾಖೆಯಲ್ಲಿ ಪಡೆಯುವುದು) | 30.12.2024 | 15:00 |

ಸದರಿ ಇ-ಟೆಂಡರ್ / ಸಂಧಾನ ಪ್ರಕಟಣೆಯ ಷರತ್ತು ಮತ್ತು ನಿಬಂಧನೆಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ (ವಾಣಿಜ್ಯ ಶಾಖೆ), ಕ.ರಾ.ರ.ಸಾ.ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು-560009 ಇವರಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಲು ಕೋರಲಾಗಿದೆ.

**-:ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು:-**

**ವಿಭಾಗೀಯ ಸಂಚಲನಾಧಿಕಾರಿಗಳು: 7760990554 / 7760990557,**

**HELP LINE: 080-8046010000/ 080-8068948777, support@eprochelpdesk.com**

**Last date for submitting application:As per e-procurement portal.**

**Tender will be opened on :As per e-procurement portal.**

ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ,
ಕೆಂಪೇಗೌಡ ಬಸ್ ನಿಲ್ದಾಣ: ಬೆಂಗಳೂರು